ಮಂಜೂರು ಮಾಡುವುದು ಸೂಕ್ತವಲ್ಲ ವೆಂದು ತಿಳಿಸಂತ್ತು ಈ ಬಗ್ಗೆ ತಮಿಳುನಾಡಂ ಸರ್ಕಾರದ ಒಪ್ಪಿಗೆಯನ್ನು ಪಡೆಯಂಬೇಕೆಂದು ಕೊರಿದರು. ಈ ಬಗ್ಗೆ ಕ್ರಮ ತೆಗೆದಂ ಕೊಳ್ಳಲಾಗಂತ್ತಿದೆ.

ಬಸವನಬೆಟ್ಟ ಅಭಯಾರಣ್ಯವನ್ನಾಗಿ ಮಾಡುವ ಬಗ್ಗೆ

೧೦೧೮ ಶ್ರೀ ಶಿವಲಿಂಗೇಗೌಡ (ಸಾತನೂರು)—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬೆಟ್ಟ ಅರಣ್ಯವನ್ನು ಅಭಯಾರಣ್ಯವೆಂದು ಘೋಷಿಸಿ ಎಷ್ಟು ವರ್ಷಗಳಾದವು?

ಆ) ಅಭಯಾರಣ್ಯವನ್ನಾಗಿ ಘೋಷಿಸಿದ ಅನಂತರ ಈವರೆವಿಗೆ ಕೈಕೊಂಡ ಅಭಿವೃದ್ಧಿ ಕಾರ್ಯ ಕ್ರಮಗಳೇನು?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯರಾಜ್ಯ ಮಂತ್ರಿಗಳು),—

ಅ) ಬಸವನಬೆಟ್ಟ ಸ್ಟೇಟ್ ಫಾರೆಸ್ಟ್‌ನ್ನು ಮತ್ತು ಇತರೆ ನಾಲ್ಕು ಸ್ಟೇಟ್ ಫಾರೆಸ್ಟ್ ಪಂತ್ತು ರಿಸರ್ವ್ ಫಾರೆಸ್ಟ್‌ಗಳೊಂದಿಗೆ ಸೇರಿಸಿ ಕಾವೇರಿ ಅಭಯಾರಣ್ಯವೆಂದು ಸರ್ಕಾರ ತನ್ನ ನೋಟಿಫಿಕೇಷನ್ ಸಂಖ್ಯೆ : ಎಫೆಚ್‌ಎಫ್‌ಎಫ್ ೪ ಎಫ್ ಡಬ್ಲ್ಯೂ ಎಲ್ ೮೭, ದಿನಾಂಕ. ೧೪-೧-೮೭ ರಂದು ಘೋಷಿಸಿದೆ.

ಆ) ಈ ಅರಣ್ಯ ಪ್ರದೇಶವನ್ನು ಅಭಯಾರಣ್ಯವೆಂದು ಘೋಷಿಸಿದ ಮೇಲೆ ಇದರ ಪರಿಸರ ಮತ್ತು ವನ್ಯ ಪ್ರಾಣಿಗಳ ರಕ್ಷಣೆಯ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ವಿದ್ಯುಚ್ಛಕ್ತಿ ಕೊರತೆಯನ್ನು ನಿವಾರಿಸಲು ಸರ್ಕಾರದ ಯೋಜನೆ

೩೩೪. ಶ್ರೀ ವಂಟ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೆ ?

ಅ) ವಿದ್ಯುತ್ ಉತ್ಪಾದನೆಯ ಕೊರತೆಯನ್ನು ನಿವಾರಿಸಲು ಸರ್ಕಾರದ ಯೋಜನೆಗಳೇನಂ?

ಆ) ಕೊರತೆಯಿರುವ ದಿನನಿತ್ಯದ ವಿದ್ಯುತ್‌ನ ಪ್ರಮಾಣವೇನು?

ಇ) ಜಲವಿದ್ಯುತ್ ಅಣು ವಿದ್ಯುತ್ ಹಾಗೂ ಥರ್ಮಲ್ ಪವರ್ ಸ್ಟೇಷನ್‌ಗಳ ಹೊಸ ಯೋಜನೆಗಳ ಹೆಸರೇನು ಹಾಗೂ ಯೋಜನೆ ಪೂರ್ತಿ ಮಾಡುವಲ್ಲಿ ಸರ್ಕಾರಕ್ಕಿರುವ ಆರ್ಥಿಕ ತೊಂದರೆ ಏನು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ಈ ಕೆಳಕಂಡ ಕ್ರಮಗಳನ್ನು ತೆಗೆದಂಕೊಳ್ಳಲಾಗಿದೆ.

೧) ದೊಡ್ಡ ಯೋಜನೆಗಳನ್ನು ಆದಷ್ಟು ಜಾಗ್ರತೆಯಾಗಿ ಪೂರ್ಣಗೊಳಿಸುವುದು—೫೨೦ ಎಂ.ಡಬ್ಲ್ಯೂಗಳನ್ನು ಸೇರಿಸಲಾಗಿದೆ.

೨) ಹೊಸ ಯೋಜನೆಗಳನ್ನು ಪ್ರಾರಂಭಿಸುವುದು.

೩) ಕೆಪ್ಟಿವ್ ಪವರ್ ಉತ್ಪಾದನೆಯಲ್ಲಿ ಖಾಸಗಿ ವಲಯದವರು ಪಾಲುಗೊಳ್ಳಲು ಪ್ರೋತ್ಸಾಹಿಸುವುದಂ.

೪) ಕೇಂದ್ರ ಯೋಜನೆಗಳಿಂದ ರಾಜ್ಯದ ಪಾಲನ್ನು ಪಡೆಯಲು ಕ್ರಮ ತೆಗೆದಂ ಕೊಳ್ಳುವುದು.

೫) ವಿತರಣೆಯಾಗದಿರುವ ವಿದ್ಯುತ್‌ನ್ನು ಕೇಂದ್ರದಿಂದ ಕರ್ನಾಟಕ ರಾಜ್ಯಕ್ಕೆ ಪಡೆಯಂಲು ಪ್ರಯತ್ನಿಸುವುದು.